# ಪಡಿತರ ಜಾಗೃತಿ ವಾರ್ತೆ

# PDS Campaign News

Issue : 1 May-June 2009


## ಪಡಿತರ ಜಾಗೃತಿ ವಾರ್ತೆ

ಸಮಾಜದ ಹಿಂದುಳಿದವರಿಗೆ, ದುರ್ಬಲವರ್ಗದವರಿಗೆ ಹಾಗು ಕಡುಬಡವರಿಗೆ ಸುಲಭ ಬೆಲೆಯಲ್ಲಿ ಆಹಾರ ಧಾನ್ಯ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಅರವತ್ತರ ದಶಕದಲ್ಲಿ ಸಾರ್ವಜನಿಕ ಪಡಿತರ ಪದ್ಧತಿಯನ್ನು ಆರಂಭಿಸಿತು. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ವಹಿಸಿ ದೇಶದ ಮೂಲೆಮೂಲೆಗಳಲ್ಲಿ ನ್ಯಾಯ ಬೆಲೆ ಅಂಗಡಿಯನ್ನು ತೆರೆಯುವಂತೆ ಸೂಚಿಸಲಾಯಿತು. ಅದರ ಪ್ರಕಾರ ಕನಿಷ್ಟ ಒಂದು ಗ್ರಾಮದಲ್ಲಿ ಒಂದು ನ್ಯಾಯ ಬೆಲೆ ಅಂಗಡಿಯನ್ನು ತೆರೆಯಲಾಯಿತು. ಆದರೆ ಇತರೆ ಸಮಾಜ ಕಲ್ಯಾಣ ಯೋಜನೆಗಳಂತೆ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲೂ ಅನೇಕ ಲೋಪ ದೋಷಗಳು ನುಸುಳಿಕೊಂಡವು. ಮುಖ್ಯವಾಗಿ ಬಡವರಿಗೆ ವಿತರಿಸಬೇಕಾದ ಆಹಾರ ಧಾನ್ಯ ಅವರಿಗೆ ತಲುಪದೆ ಕಳ್ಳಸಂತೆಯಲ್ಲಿ ಮಾರಾಟವಾಗಲು ಆರಂಭವಾಯಿತು. ಈಗಲೂ ಅದು ನಡೆಯುತ್ತಿದೆ. ಕೇಂದ್ರ ಸರ್ಕಾರದ ಯೋಜನಾ ಆಯೋಗವೂ ಸೇರಿದಂತೆ ಅನೇಕ ಅಧ್ಯಯನಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಕಂಡುಬಂದಿರುವ ದೋಷಗಳನ್ನು ಪಟ್ಟಿಮಾಡಿದೆ. ಮುಖ್ಯವಾಗಿ ನ್ಯಾಯ ಬೆಲೆ ಅಂಗಡಿಗಳ ಕಾರ್ಯ ವೈಖರಿ ಬಗ್ಗೆ ಸರ್ಕಾರದ ಗಮನ ಸೆಳದು ಅದರ ದಕ್ಷತೆಯನ್ನು ಹೆಚ್ಚಿಸಲು ಅನೇಕ ಸಲಹೆ ಸೂಚನೆಗಳನ್ನು ನೀಡಿದೆ.



ನ್ಯಾಯಬೆಲೆ ಅಂಗಡಿಗಳ ಕಾರ್ಯ ವೈಖರಿಯನ್ನು ಉತ್ತಮಪಡಿಸಲು ಸರ್ಕಾರ ನಾಗರಿಕ ಸನ್ನದನ್ನು ಪ್ರಕಟಿಸಿದೆ. ಅಲ್ಲದೆ ಪ್ರತಿಯೊಂದು ಅಂಗಡಿಯ ಮಟ್ಟದಲ್ಲೂ ಜಾಗೃತ ಸಮಿತಿ ಅಥವ ವಿಜಿಲೆನ್ಸ ಕಮಿಟಿಯನ್ನು ಸ್ಥಾಪಿಸಿದೆ. ಆದರೂ ನ್ಯಾಯ ಬೆಲೆ ಅಂಗಡಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ನಾಗರಿಕರಿಗೆ ಆಹಾರ ಧಾನ್ಯಗಳು ಸಮಯಕ್ಕೆ ಸರಿಯಾಗಿ, ನಿಗದಿಗ ಬೆಲೆಗೆ ಹಾಗು ನಿಗದಿತ ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಅಂಗಡಿಗಳು ನಿಗದಿತ ವೇಳೆಯಲ್ಲಿ ತೆರೆದಿರುವುದಿಲ್ಲ. ಇದಕ್ಕೆ ಕಾರಣ ಪಡಿತರ ಚೀಟಿದಾರರಿಗೆ ನ್ಯಾಯ ಬೆಲೆ ಅಂಗಡಿ ವಿಷಯದಲ್ಲಿ ಅವರ ಹಕ್ಕು ಹಾಗು ಜವಾಬ್ದಾರಿಗಳ ಬಗ್ಗೆ ಹೆಚ್ಚಿನ ಅರಿವು ಇಲ್ಲ. ಇದ್ದರೂ ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಜಾಗೃತ ಸಮಿತಿಗಳು ಸಹ ತಮ್ಮ ಪಾತ್ರವನ್ನು ನಿರ್ವಹಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪಡಿತರ ಚೀಟಿದಾರರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಮುಖ್ಯವಾಗಿದೆ. ಇದಕ್ಕಾಗಿ ಜಾಗೃತಿ ಕಾರ್ಯಕ್ರಮ ನಿರಂತರವಾಗಿ ನಡೆಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು ಕ್ರಿಯೇಟ್ ಸಂಸ್ಥೆಯನ್ನು ಒಂದು ನೊಡಲ್ ಸಂಸ್ಥೆಯನ್ನಾಗಿ ಗುರುತಿಸಿ ಪಡಿತರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಸೂಚಿಸಿತು. ಅದರ ಪ್ರಕಾರ ಕ್ರಿಯೇಟ್ ರಾಜ್ಯದ ೨೫ ಪ್ರಮುಖ ಸ್ಥಳಗಳಲ್ಲಿ ಪಡಿತರ ಜಾಗೃತಿತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ಕಾರ್ಯಕ್ರಮ ಮೇ ೨೦೦೯ ರಿಂದ ಡಿಸಂಬರ್ ೨೦೦೯ರ ವರೆಗೆ ಜರುಗಲಿದೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶಗಳು ಇವು:–

### ಮೇಲ್ಕಂಡ ಉದ್ದೇಶಗಳನ್ನು ಸಪಳಗೊಳಿಸಲು ಕ್ರಿಯೇಟ್ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ಚೀಟಿದಾರರ ಹಕ್ಕು ಹಾಗು ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು

ನ್ಯಾಯ ಬೆಲೆ ಅಂಗಡಿಯ ಕಾರ್ಯಾಚರಣೆಯಲ್ಲಿ ಪಡಿತರ ಚೀಟಿದಾರರು ಹೇಗೆ ಭಾಗವಹಿಸಬಹುದು ಎಂಬುದರ ಬಗ್ಗೆ ಮಾಹಿತಿ ನೀಡುವುದು

ಸರ್ಕಾರ ಪ್ರಕಟಿಸಿರುವ ನಾಗರಿಕ ಸನ್ನದಿನ ಬಗ್ಗೆ ಮಾಹಿತಿ ವಿತರಿಸುವುದು

ಪಡಿತರ ಚೀಟಿದಾರರ ಕುಂದುಕೊರತೆಗಳನ್ನು ಆಲಿಸಿ ಅವುಗಳನ್ನು ಪರಿಹರಿಸಲು ಪ್ರಯತ್ನಿಸುವುದು

ಜಾಗೃತ ಸಮಿತಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸುವಂತೆ ಮಾಡುವುದು



ಆಹಾರ ಇಲಾಖೆಯ ಅಧಿಕಾರಿಗಳು, ನ್ಯಾಯ ಬೆಲೆ ಅಂಗಡಿಯ ಮಾಲೀಕರು ಹಾಗು ಪಡಿತರ ಚೀಟಿದಾರರಲ್ಲಿ ಸೌಹಾರ್ದತೆ ಉಂಟುಮಾಡಲು ಸಹಕರಿಸುವುದು

ರಾಜ್ಯದ ವಿವಿದೆಡೆ ಕಾರ್ಯಕ್ರಮ ನಡೆಸಲು ಆಸಕ್ತಿ ಹಾಗು ಸಾರ್ಮರ್ಥ್ಯವಿರುವ ಸಂಘ/ಸಂಸ್ಥೆಗಳನ್ನು ಗುರುತಿಸಿ ಅದರ ಪ್ರತಿನಿಧಿಗಳಿಗೆ ಬೆಂಗಳೂರಿನಲ್ಲಿ ಎರಡು ದಿನದ ತರಬೇತಿ ಕಾರ್ಯಕ್ರಮ

ರಾಜ್ಯದ ೨೫ ಸ್ಥಳಗಳಲ್ಲಿ ಒಂದು ದಿನದ ಪಡಿತರ ಜಾಗೃತಿ ಕಾರ್ಯಕ್ರಮ

ಆಹಾರ ಇಲಾಖೆಯ ನಾಗರಿಕ ಸನ್ನದು ಹಾಗು ಅದರ ಮುಖ್ಯ ಅಂಶಗಳನ್ನು ಒಳಗೊಂಡ ಕರಪತ್ರ, ಕೈಪಿಡಿ ಇತ್ಯಾದಿ ಪ್ರಕಟಿಸಿ ಅದನ್ನು ಹಂಚುವುದು

ಜಾಗೃತಿ ಕಾರ್ಯಕ್ರಮದಲ್ಲಿ ಪಡಿತರ ಚೀಟಿದಾರರ ಕುಂದುಕೊರತೆಗಳನ್ನು ಆಲಿಸಿ ಅದರ ಬಗ್ಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಹಾಗು ಸರ್ಕಾರಕ್ಕೆ ಮನವಿ ಸಲ್ಲಿಸುವುದು

ಜಾಗೃತಿ ಕಾರ್ಯಕ್ರಮದ ಅಂತ್ಯದಲ್ಲಿ ವರದಿಯನ್ನು ತಯಾರಿಸಿ ಪಡಿತರ ವ್ಯವಸ್ಥೆ ಉತ್ತಮಪಡಿಸಲು ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡುವುದು.

## ಚಟುವಟಿಕೆಗಳ ವಿವರ (ಜೂನ್ 2009ರ ಅಂತ್ಯದವರೆಗೆ)

ಜಾಗೃತಿ ಕಾರ್ಯಕ್ರಮ ನಡೆಸಲು ಸುಮಾರು ೨೦ ಸಂಸ್ಥೆಗಳನ್ನು ಗುರುತಿಸಲಾಗಿದೆ

ಮೇ ೧ ಹಾಗು ೨ ರಂದು ಬೆಂಗಳೂರಿನಲ್ಲಿ ತರಬೇತಿ ಕಾರ್ಯಕ್ರಮ ಮುಗಿದಿದೆ. ಇದರಲ್ಲಿ ರಾಜ್ಯದ ನಾನಾ ಭಾಗಗಳಿಂದ ಸುಮಾರು ೪೦ ಅಭ್ಯರ್ಥಿಗಳು ಭಾಗವಹಿಸಿದ್ದರು. ಇದರ ಪೂರ್ಣ ವಿವರವನ್ನು ಕ್ರಿಯೇಟ್ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ (www.creatindia.org)

ಹದಿಮೂರು ಸ್ಥಳಗಳಲ್ಲಿ ಪಡಿತರ ಜಾಗೃತಿ ಕಾರ್ಯಕ್ರಮ ನಡೆಸಲಾಗಿದೆ (ವಿವರವನ್ನು ಮೇಲೆ ನೀಡಲಾಗಿದೆ)

ಪಡಿತರಿಗೆ ಅಗತ್ಯವಾದ ಮಾಹಿತಿ ಒಳಗೊಂಡ ನಾಲ್ಕು ಕೈಪಿಡಿಗಳನ್ನು ಪ್ರಕಟಿಸಲಾಗಿದೆ. ಇದನ್ನು ಜಾಗೃತಿ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಹಂಚಲಾಗುತ್ತಿದೆ. ಪ್ರಕಟವಾಗಿರುವ ಕೈಪಿಡಿಗಳು ಇವು:–

೧. ನ್ಯಾಯ ಬೆಲೆ ಅಂಗಡಿಯಲ್ಲಿ ನಿಮ್ಮ ಹಕ್ಕು ಹಾಗು ಜವಾಬ್ದಾರಿಗಳು
೨. ಪಡಿತರ ಚೀಟಿ ಪಡೆಯುವುದು ಹೇಗೆ?
೩. ಆಹಾರ ಇಲಾಖೆಯಲ್ಲಿ ಕಾರ್ಯಾದಾರಿಗಿತ ಗುಣಮಟ್ಟ
೪. ಆಹಾರ ಇಲಾಖೆಯಲ್ಲಿ ಮಾಹಿತಿ ಹಕ್ಕು ಕಾನೂನಿನ ಪ್ರಕಾರ ನೇಮಕಗೊಂಡಿರುವ ಅಧಿಕಾರಿಗಳ ವಿವರ

ಈ ಕೈ ಪೀಡಿಗಳನ್ನು ಕ್ರಿಯೇಟ್ ವೆಬ್‌ಸೈಟ್ ನಲ್ಲಿ ನೋಡಬಹುದು

## ಕರ್ನಾಟಕದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕೆಲ ಅಂಕಿ ಅಂಶಗಳು:

| | |
|---|---|
| ಸಗಟು (ಹೋಲ್ ಸೇಲ್) ವಿತರಣಾ ಕೇಂದ್ರಗಳು | ೧೮೭ |
| ಚಿಲ್ಲರೆ (ರೀಟೇಲ್) ಕೇಂದ್ರಗಳು | ೧೯೪ |
| ಆಹಾರ ನಿರೀಕ್ಷಕರು | ೫೫೭ |
| ಕಾಲಿ ಇರುವ ಆಹಾರ ನಿರೀಕ್ಷಕರ ಹುದ್ದೆಗಳು | ೪೦ |
| ಅಂತ್ಯೋದಯ ಯೋಜನೆ ಅಡಿಯಲ್ಲಿ ಆಹಾರ ಧಾನ್ಯಗಳ ಅಲಾಟ್‌ಮೆಂಟ್ (ತಿಂಗಳಿಗೆ) | ಅಕ್ಕಿ – ೩೪೭೯ ಟನ್<br>ಗೋಧಿ – ೭೨೮೨ ಟನ್ |
| ಬಿಪಿಎಲ್ ಕಾರ್ಡುದಾರರಿಗೆ ಆಹಾರ ಧಾನ್ಯಗಳ ಅಲಾಟ್‌ಮೆಂಟ್ | ಅಕ್ಕಿ – ೫೫೮೨೦ ಟನ್<br>ಗೋಧಿ – ೧೧೭೧೨ ಟನ್ |
| ಪಡಿತರ ಚೀಟಿದಾರರು | ಎಪಿಎಲ್ – ೫೪೨೦೬೬೦, ಬಿಪಿಎಲ್ – ೭೬೭೭೧೬೮ ಹಾಗು ಅಂತ್ಯೋದಯ – ೧೧೯೭೦೦ |

## ಪಡಿತರ ಜಾಗೃತಿ ಕಾರ್ಯಕ್ರಮದ ವಿವರ:

ಮೇ ಹಾಗು ಜೂನ್ ೨೦೦೯ರಲ್ಲಿ ಕ್ರಿಯೇಟ್, ಸ್ಥಳೀಯ ಸಂಘ/ಸಂಸ್ಥೆಗಳೊಂದಿಗೆ ಕೆಳಕಂಡ ಸ್ಥಳಗಳಲ್ಲಿ ಪಡಿತರ ಜಾಗೃತಿ ಕಾರ್ಯಕ್ರಮ ನಡೆಸಿದೆ.

| ಸ್ಥಳ | ದಿನಾಂಕ | ಸ್ಥಳೀಯ ಸಂಸ್ಥೆಯ ಹಸರು |
|---|---|---|
| ಚಿಕ್ಕಮಗಳೂರು | ೨೮.೫.೨೦೦೯ | ಗ್ರಾಹಕರ ಹಕ್ಕು, ಶಿಕ್ಷಣ, ಅರಿವು ಸ್ವಯಂ ಸೇವಾ ಸಂಘ |
| ಬಾಗಲಕೋಟೆ | ೬.೬.೨೦೦೯ | ಬರ್ಡ್ಸ್ |
| ಮಂಗಳೂರು | ೭.೬.೨೦೦೯ | ಡೀಡ್ಸ |
| ಬೆಳಗಾವಿ | ೧೪.೬.೨೦೦೯ | ಜನಪರ ಸೇವಾ ಸಂಸ್ಥೆ |
| ಉಡುಪಿ | ೧೬.೬.೨೦೦೯ | ಬಳಕೆದಾರರ ವೇದಿಕೆ, ಉಡುಪಿ |
| ಬೆಂಗಳೂರು ನಗರ | ೧೮.೬.೨೦೦೯ | ಸಿವಿಕ್ ಸಂಸ್ಥೆ |
| ಬಿಜಾಪುರ | ೧೯.೬.೨೦೦೯ | ಸಮುದಾಯ ಸಂಪನ್ಮೂಲ ಅಭಿವೃದ್ಧಿ ಸೊಸೈಟಿ |
| ಚಿಂತಾಮಣಿ | ೨೦.೬.೨೦೦೯ | ಜನ ಜಾಗೃತಿ ವೇದಿಕೆ |
| ರಾಣೇಬೆನ್ನೂರು | ೨೪.೬.೨೦೦೯ | ನೀಡ್ಸ ಸಂಸ್ಥೆ |
| ಶಿವಮೊಗ್ಗ | ೨೭.೬.೨೦೦೯ | ಜಿಲ್ಲಾ ಬಳಕೆದಾರರ ವೇದಿಕೆ |
| ದಾರವಾಡ | ೨೮.೬.೨೦೦೯ | ಜನಪರ ಸೇವಾ ಸಂಸ್ಥೆ |
| ಗೌನಿಪಲ್ಲಿ, ಕೋಲಾರ | ೩೦.೬.೨೦೦೯ | ಜನ ಜಾಗೃತಿ ವೇದಿಕೆ |
| ಬೀದರ್ | ೩೦.೬.೨೦೦೯ | ಸಮರಸ |


24.6.2009 ರಂದು ರಾಣೇಬೆನ್ನೂರಿನಲ್ಲಿ ನಡೆದ ಕಾರ್ಯಕ್ರಮ


28.5.2009 ರಂದು ಚಿಕ್ಕಮಗಳೂರಿನಲ್ಲಿ ನಡೆದ ಕಾರ್ಯಕ್ರಮ


28.6.2009 ರಂದು ದಾರಾವಾಡದಲ್ಲಿ ನಡೆದ ಕಾರ್ಯಕ್ರಮ


20.6.2009 ರಂದು ಚಿಂತಾಮಣಿಯಲ್ಲಿ ನಡೆದ ಕಾರ್ಯಕ್ರಮ

### ಆಹಾರ ಭದ್ರತೆ

ಬಡವರಿಗೆ ಆಹಾರದ ಭದ್ರತೆಯ ಭರವಸೆ ನಿಡಿರುವ ಕೇಂದ್ರ ಸರ್ಕಾರ ನೂರು ದಿನಗಳ ಒಳಗಾಗಿ ಇದಕ್ಕೆ ಸಂಬಂಧಿಸಿದ ಕಾನೂನೊಂದನ್ನು ಜಾರಿಗೆ ತರಲಿದೆ. ಭಾರತದ ಹಲವು ರಾಜ್ಯಗಳಲ್ಲಿ ಹಸಿವಿನಿಂದ ಸಾವುಗಳು ಸಂಭವಿಸಿದ್ದು ವರದಿಯಾದರೂ ಅದರ ಹೊಣೆ ಯಾರದ್ದು ಎಂಬುದು ಕೇವಲ ಮಾಧ್ಯಮದ ಚರ್ಚೆಯ ವಿಚಯವಷ್ಟೇ ಆಗಿ ಉಳಿಯಿತು. ಉದ್ದೇಶಿತ ಕಾನೂನು ನಾಗರಿಕ ಸರಬಾರಜಿನಂಥ ಇಲಾಖೆಗಳನ್ನು ಹೆಚ್ಚು ಉತ್ತರದಾಯಿತಳನ್ನಾಗಿಸುವ ಸಾಧ್ಯತೆ ಇದೆ. ಈ ಕಾನೂನು ರೂಪಿಸುವುದಕ್ಕೆ 'ಬಡತನ ರೇಖೆ'ಯ ನಿರ್ವಚನಕ್ಕೆ ಇಡೀ ಭಾರತಕ್ಕೆ ಅನ್ವಯಿಸುವಂಥ ಆದಾಯ ಮಿತಿಯೊಂದನ್ನು ನಿರ್ಧರಿಸಲು ಸಾಧ್ಯವಿಲ್ಲ. ಪ್ರದೇಶಾವಾರು ಭಿನ್ನತೆಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ರೂಪಿಸಬೇಕಾಗುತ್ತದೆ. ಬಡತದ ರೇಖೆಗೆ ಸ್ಪಷ್ಟ ನಿರ್ವಚನ ನೀಡುವ ಕೆಲಸ ನೂರು ದಿನಗಳ ಒಳಗೆ ಮುಗಿಯುತ್ತದೆ ಎಂದು ಕೃಷಿ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯ ರಾಜ್ಯ ಸಚಿವ ಕೆ.ಎ.ಥಾಮಸ್ ಅಭಿಪ್ರಾಯ ಪಟ್ಟಿದ್ದಾರೆ. ಯುಪಿಎಯ ನೂರು ದಿನಗಳ ಕಾರ್ಯಕ್ರಮಗಳ ಪಟ್ಟಿಯಲ್ಲಿ ಈ ಅಂಶವೂ ಇರುವುದರಿಂದ ನಿಗದಿತ ಅವಧಿಯೊಳಗೆ 'ಬಡತನ ರೇಖೆ' ಯಾವುದು ಎಂಬುದು ಸ್ಪಷ್ಟವಾಗ ಬಹುದು.

(ಆಧಾರ: ಉದಯವಾಣಿಯ ಸಂಪಾದಕೀಯ)

# Campaign on Public Distribution Systems

There are a number of studies and research reports including those from the Planning Commission indicating the loopholes in the Public Distribution System (PDS). Despite the Central and State Governments taking up several steps to plug the leakage and other bottlenecks in the PDS, the situation remains alarming. Reports indicate that in some states as much as 80 per cent of the PDS allocation of food grains find their way into the black market. Corruption in the PDS is well known and needs no mention. Various studies and surveys have recommended a number of steps to be taken to improve the functioning of the PDS. Almost all studies have highlighted the need for wider dissemination of information among the ration cardholders.



PDS Programme held on 1st May,2009 at Bengaluru

The success of the PDS largely depends to the extent the beneficiaries are aware of their entitlements and their rights at the Fair Price Shops (FPS). In this connection the Citizens' Charter issued by the Department of Food, Public Distribution and Consumer Affairs (FPD&CA) and the constitution of Vigilance Committees (VCs) at the FPS level are the two important methods of improving the PDS. Besides, the Hon'ble Supreme Court has given several directions to ensure food security. Voluntary consumer organizations (VCOs) and other civil society groups can play a major role in strengthening the PDS.

In this background the department of FPD&CA, Government of Karnataka has launched a campaign in 25 districts of the State. The objective is to inform, educate and empower ration cardholders and other beneficiaries about their rights and entitlements in the FPS. The department has identified the Consumer Rights Education and Awareness Trust (CREAT) as the implementing agency and has provided financial assistance to organize outreach meetings, bring out publications, conduct capacity building programs etc.

CREAT has launched this campaign from 1st May 2009 and will continue through end of December 2009. The objectives of this campaign are to:

**Sensitize the ration cardholders about their rights and responsibilities in the Fair Price Shops and in the Food Department**

- Create awareness among the public about the working of PDS
- Disseminate information about the Citizens' Charter published by the Department
- Identify the grievances of the ration cardholders and bring it to the notice of the concerned officials
- Improve the working of Vigilance Committees attached to FPS
- Improve the relationship between the owners of FPS, officials and the cardholders

**Following are some of the activities planned:**

- Identifying civil society organizations which, can be network partners of this program
- Organizing a two day capacity building program at Bangalore
- Conducting one day outreach programs in each of the 25 districts of Karnataka
- Preparation of a training module
- Printing and distribution of PDS Citizens' Charters and handouts
- Preparing a four pages newsletter highlighting the activities under the program and PDS related news items
- Organizing a review meeting/concluding workshop for partner organizations
- Submission of a report to the Government/Department

## CORRUPTION IN PUBLIC DISTRIBUTION SYSTEM

The Centre for Media Studies, New Delhi, had conducted a study to assess the prevalence of corruption in the PDS. The countrywide survey done in 2005 has revealed the following:

Total monetary value of petty corruption in public distribution system (PDS) in thecountry is estimated to be Rs. 358 crores per annum.

9.1 crore households are estimated to be using the public distribution system as against approximately 16 crores claimed by the government. Of these, 7.6 crores are in rural areas while 1.5 crores are in urban areas.1.5 crore (1.22 rural and 0.24 crores urban) households claimed to have paid bribe during the last one year.Level of corruption is much higher in States with higher poverty incidence. Nearly 60 per cent of the households using PDS said that unavailability of ration at the Fair Price Shop (FPS) was very frequent. In high poverty incidence States, it was as high as 80 percent.34 per cent of those visiting ration offices had to make four or more visits to the office before their work was done.One-third of those making four or more visits to the ration office had to visit because in the earlier visits the concerned officer either could not be located or was absent. Nearly half of the people paid bribe to get a new ration card ■

*Source: CMS website*

# Outcome of the project:

**Short-term**

In the short term, the following objectives are expected:

- Reaching out to 5000 citizens and informing them about the PDS and FPS
- Emergence of 50 activists/groups who are well informed about PDS/FPS/Right to Food
- A base paper highlighting the problems, difficulties and grievances of ration cardholders. This paper can be used for advocacy purposes

**Long-term:**

In the long term the campaign is expected to result in the emergence of a few consumer organizations civil society groups which are well informed and empowered to articulate on issues related to food security, right to food and PDS. The training and capacity building programs included in the campaign is expected to inform and the experience gained in organizing the outreach meetings is expected to motive the network partners to take the campaign further on a sustainable basis. It is also expected that the network partners/organizations will take up Right to Food Campaign

**Contents/topics for district level outreach programs:**

In each of the district or taluka level outreach meetings the following topics will be discussed:

- The working of the PDS and FPS
- Citizens' Charter issued by the Department
- Grievance Redressal machinery in PDS/FPS
- Rights and responsibilities of FPS owners
- Vigilance Committees and its activities
- Rights and entitlement of ration cardholders
- Using Right to Information Act for getting information from PDS/FPS
- Provisions of the Weights and Measures Act and Consumer Protection Act

**Activities completed (up to end of June 2009)**

- Two day capacity building program held on 1 & 2 May 2009 at National Law School of India University campus, Bangalore. For viewing the full report of the event visit our website www.creatindia.org



**Meeting at Udupi on 16th June 2009.**

- Training module and handouts distributed to the participants in the above workshop
- First outreach meeting completed at Chickmagalur on 27th May 2009.
- Following four leaflets (in Kannada) published:

1. Your right to information in the Fair Price Shop
2. How to obtain a Ration card
3. Standard time limits for various works relating to Ration cards
4. Public Information Officers in the department of FPD&CA

To download or view the above leaflets visit our website www.creatindia.org

*Published by :*

**CONSUMER RIGHTS EDUCATION & AWARENESS TRUST (CREAT)**

Since : 1993

No.900,1st Stage , 1st Phase , 15th Cross, Chandra Layout, Nagarabhavi Post, Bengaluru-72

Tel : 91-80-23181648, E.mail : info@creatindia.org, Website : www.creatindia.org